# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ


**ಸುಭಾಷಿತ:**

ಕಷ್ಟ ಬಂದೆಂದು ಅತ್ತರೆ ನಾಟಕ ಎನ್ನುವರು
ಸುಖದಲ್ಲಿದ್ದೇನೆಂದು ನಕ್ಕರೆ ಹುಚ್ಚ ಎನ್ನುವರು
ಗೌರವಕ್ಕಾಗಿ ಮೌನವಾದರೆ ತಕ್ಕತಸ್ಥ ಎನ್ನುವರು
ಪರರಿಗೆ ನೆರವಾದರೆ ಅಧಿಕಪ್ರಸಂಗಿ ಎನ್ನುವರು
ಸಹವಾಸ ಸಾಕೆಂದರೆ ಅಹಂಕಾರಿ ಎನ್ನುವರು
ಸತ್ತವರನ್ನು ಬದುಕಿಸುವಂತೆ ಮಾಡುವರು
ಬದುಕಿದವರನ್ನು ಸಾಯಿಸಿಯೇ ಬಿಡುವರು
ಇದ್ದಾಗ ನಗುವರು.. ಹೋದಾಗ ಅಳುವರು
ಇದೆಲ್ಲವ ಬಿಟ್ಟು ಬಾಳಿದರೆ ಮನುಜನಾಗುವರು..
**ಭಗವಾನ್ ಶ್ರೀಕೃಷ್ಣ**




PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 07-11-2025 to 13-11-2025 ಬೆಲೆ:10-00 ಸಂಪುಟ–1 ಸಂಚಿಕೆ–6 ಪುಟಗಳು–6









ಇತ್ತೀಚಿನ ದಿನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ರೈತರನ್ನು ಅತಿಯಾಗಿ ಕಾಡುತ್ತಿರುವ ಸಮಸ್ಯೆಗಳಲ್ಲಿ ಅಡಿಕೆ ಬೆಳೆಗೆ ಬರುತ್ತಿರುವ ರೋಗಗಳು ಪ್ರಮುಖವಾಗಿವೆ. ಸುಳ್ಯ ತಾಲೂಕಿನಲ್ಲಿ ಹಲವು ವರ್ಷದಿಂದ ಅಡಿಕೆಗೆ ಹಳದಿ ರೋಗ ಭಾದಿಸಿ ಇಂದು ತಾಲೂಕಿನಲ್ಲಿ ಅಡಿಕೆ ಬೆಳೆ ಕಣ್ಮರೆಯಾಗುತ್ತಿದೆ. ರೈತರು ಪರ್ಯಾಯ ಬೆಳೆಗೆ ಹೊಂದಿಕೊಳ್ಳಲಾಗದೆ ಅಪಾರ ನಷ್ಟ ಅನುಭವಿಸುತ್ತಿದ್ದಾರೆ. ಹಿಂದೆ ಅಷ್ಟಾಗಿ ಕಾಡದಿದ್ದ ಎಲೆಚುಕ್ಕಿರೋಗ ಈ ವರ್ಷದ ಅತಿಯಾದ ಮಳೆಯ ಕಾರಣದಿಂದ ತೋಟಕ್ಕೆ ತೋಟವನ್ನೇ ಬಲಿ ಪಡೆಯುವ ಮಟ್ಟಕ್ಕೆ ಕಾಡುತ್ತಿದೆ. ಅದರೊಂದಿಗೆ ಹಿಂಗಾರ ಸುಟ್ಟು ಹೋಗುವ ರೋಗ, ಹೀಗೆ ಹಲವಾರು ರೋಗಗಳು ಭಾಧಿಸುತ್ತಿದೆ. ಇದೆಲ್ಲದರ ಬಗ್ಗೆ ಸರಕಾರ ಗಮನಹರಿಸಿ ರೈತರ ಹಿತ ಕಾಪಾಡಬೇಕಾಗಿದೆ.

## ಪ್ರಧಾನಿಯಿಂದ "ಕೃಷ್ಣ ಕಾರಿಡಾರ್"ಗೆ ಹಸಿರು ನಿಶಾನೆ..?



**ಉಡುಪಿ:** ಪ್ರಧಾನಿ ನರೇಂದ್ರ ಮೋದಿ ನವೆಂಬರ್ 28ಕ್ಕೆ ಉಡುಪಿಗೆ ಬರಲಿದ್ದು, ಕೃಷ್ಣಮಠಕ್ಕೆ ಭೇಟಿ ನೀಡುವ ಅವರು ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಪ್ರಧಾನಿ ಭೇಟಿಯ ಜೊತೆಗೆ ಉಡುಪಿಯ "ಕೃಷ್ಣ ಕಾರಿಡಾರ್" ಯೋಜನೆಯ ಕನಸು ಚಿಗುರಿದೆ. ಪ್ರಧಾನಿಯಾದ ಬಳಿಕ ಇದೇ ಮೊದಲ ಬಾರಿಗೆ ನರೇಂದ್ರ ಮೋದಿ ಉಡುಪಿ ಅವರು ಶ್ರೀ ಕೃಷ್ಣ ಮಠಕ್ಕೆ ಭೇಟಿ ನೀಡಲಿರುವುದು ವಿಶೇಷ. ಪರ್ಯಾಯ ಶ್ರೀ ಪುತ್ತಿಗೆ ಮಠದವರು ಆಯೋಜಿಸಿರುವ ಲಕ್ಷ ಕಂಠ ಗೀತಾ ಕಾರ್ಯಕ್ರಮದಲ್ಲಿ ಅವರು ಭಾಗಿಯಾಗಲಿದ್ದಾರೆ. ನವಂಬರ್ 28ರಂದು ನಡೆಯುವ ಈ ಕಾರ್ಯಕ್ರಮದಲ್ಲಿ, **3ನೇ ಪುಟಕ್ಕೆ**

## ವಿಶ್ವದಲ್ಲೇ ಕೌಶಲ್ಯಗಳಿಗೆ ಹೆಸರಾದ ರಾಜ್ಯವನ್ನಾಗಿಸುವ ಗುರಿ–ಸಿದ್ದರಾಮಯ್ಯ



ಕೌಶಲ್ಯ ಶೃಂಗಸಭೆ ಕರ್ನಾಟಕದ ಕೌಶಲ್ಯ ಪಯಣದಲ್ಲಿ ಒಂದು ಮೈಲಿಗಲ್ಲು. ಕರ್ನಾಟಕವನ್ನು ವಿಶ್ವದಲ್ಲೇ ಕೌಶಲ್ಯಗಳಿಗೆ ಹೆಸರಾದ ರಾಜ್ಯವನ್ನಾಗಿಸುವುದು ನಮ್ಮ ಗುರಿ. ಇಎಸ್ ಡಿಎಂಎಐ/ಎಂಎಲ್ ಏರೋಸ್ಪೇಸ್, ಹಸಿರು ಇಂಧನ, ಒಳಗೊಳ್ಳುವಿಕೆ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಉದ್ಯೋಗಕ್ಕೆ ತಯಾರಾಗಿರುವ ಕಾರ್ಮಿಕ ಪಡೆಯನ್ನು ಸಿದ್ದಮಾಡುವತ್ತ ಗಮನವನ್ನು ಕೇಂದ್ರೀಕೃತಗೊಳಿಸಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಕರ್ನಾಟಕ ಇಂದು ಒಂದು ವಿಶಿಷ್ಟ ಜನಸಂಖ್ಯೆಯ ಹೊರಳು ಹಾದಿಯಲ್ಲಿದೆ. ನಮ್ಮ ಜನಸಂಖ್ಯೆಯ ಶೇ. 60 ಕ್ಕಿಂತ ಹೆಚ್ಚು ಜನರು 35 ವಯೋಮಾನದೊಳಗಿದ್ದಾರೆ. ಮುಂದಿನ ದಶಕದಲ್ಲಿ ಸುಮಾರು **3ನೇ ಪುಟಕ್ಕೆ**

## ಟನಲ್ ರಸ್ತೆ ಮೋದಿ ಮಾಡಿದರೆ ಚಮತ್ಕಾರ –ಡಿಕೆ ಸುರೇಶ್



**ಬೆಂಗಳೂರು:** ಬಿಜೆಪಿಯವರ ಪ್ರಕಾರ ಮೋದಿ ಅವರು ಟನಲ್ ರಸ್ತೆ ಮಾಡಿದರೆ ಚಮತ್ಕಾರ, ಕಾಂಗ್ರೆಸ್ ಸರ್ಕಾರ ಮಾಡಿದರೆ ಬಲತ್ಕಾರ. ಕಾಂಗ್ರೆಸ್ ಸರಕಾರದ ಕಾಲದಲ್ಲಿ ಯಾವುದೇ ಅಭಿವೃದ್ಧಿ ಯೋಜನೆ ಆಗಬಾರದು ಎಂಬ ಅಸೂಯೆ, ಕುತಂತ್ರ ಬಿಜೆಪಿಯದು. ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿಗೆ ಶಾಶ್ವತ ಪರಿಹಾರ ನೀಡುತ್ತಿದ್ದಾರೆ. ಬಿಜೆಪಿಯಿಂದ ಸಾಧ್ಯವಾಗದ್ದನ್ನು ನಾವು ತೀರ್ಮಾನ ಮಾಡಿದ್ದೇವೆ ಎಂಬ ಅಸೂಯೆ ಅವರದು" ಎಂದು ಬಮೂಲ್ ಅಧ್ಯಕ್ಷರಾದ **3ನೇ ಪುಟಕ್ಕೆ**


ಕ್ಷಣ ಕ್ಷಣದ ಸುದ್ದಿಗಳಿಗಾಗಿ
ಕರಾವಳಿ ತರಂಗಿಣಿ
ಪತ್ರಿಕಾ ಬಳಗದಿಂದ
ಅಂತರ್ಜಾಲ ಮಾಧ್ಯಮ
www.karavalitharangini.com
ಕರಾವಳಿ ತರಂಗಿಣಿ
ಮಂಗಳೂರು








# ಸುದ್ದಿ ತುಣುಕು

ಸಾರ್ವಜನಿಕ ಸ್ಥಳಗಳಲ್ಲಿ ಖಾಸಗಿ ಕಾರ್ಯಕ್ರಮಗಳಿಗೆ ಅನುಮತಿ ಕಡ್ಡಾಯ ಆದೇಶಕ್ಕೆ ನೀಡಿದ್ದ ತಡೆಯಾಜ್ಞೆ ಪ್ರಶ್ನಿಸಿದ್ದ ಅರ್ಜಿಯನ್ನು ದ್ವಿಸದಸ್ಯ ಪೀಠ ವಜಾಗೊಳಿಸಿದೆ.

ಕಬ್ಬು ಬೆಳೆಗಾರರ ಜೊತೆ ಸರ್ಕಾರದ ಮಾತುಕತೆ ವಿಫಲವಾಗಿದ್ದು, ರೈತರು ಆಕ್ರೋಶ ಹೊರ ಹಾಕಿದ್ದಾರೆ. ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ರಾಜ್ಯಾದ್ಯಂತ ಹೆದ್ದಾರಿ ಬಂದ್ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಚಿತ್ತಾಪುರದಲ್ಲಿ ಪಥ ಸಂಚಲನಕ್ಕೆ ಅನುಮತಿ ನೀಡುವಂತೆ ಸರ್ಕಾರಕ್ಕೆ ಆರ್‌ಎಸ್‌ಎಸ್ ಪ್ರಸ್ತಾವನೆ ಸಲ್ಲಿಸಿದೆ.

ಚಂಪಾ ಷಷ್ಠಿ ಜಾತ್ರಾ ಮಹೋತ್ಸವದ ಗೂಟ ಪೂಜೆ ಮತ್ತು ಪೂರ್ವಭಾವಿ ಧಾರ್ಮಿಕ ವಿಧಿವಿಧಾನಗಳು ನೆರವೇರಿದವು.

ಮಹಿಳೆಯರಿಗೆ ಹೆಚ್ಚು ಸುರಕ್ಷತೆ ನೀಡುವ ಸಲುವಾಗಿ ಅಕ್ಕ ಪಡೆಯನ್ನು ರಾಜ್ಯಾದ್ಯಂತ ಆರಂಭಿಸಲಾಗುತ್ತಿದೆ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದರು.

ಹೆಣ್ಣಾನೆ ಸುಭದ್ರೆಯ ಮಾಲಿಕತ್ವದ ವಿಚಾರವಾಗಿ ಉಡುಪಿ ಮಠಕ್ಕೆ ಆಕ್ಷೇಪಣೆ ಸಲ್ಲಿಸಲು ಹೈಕೋರ್ಟ್ ಇಂದು ಕೊನೆಯ ಅವಕಾಶ ನೀಡಿದೆ.

ಕಾಶಿ ಕಾರಿಡಾರ್ ಮಾದರಿಯಲ್ಲೇ ಕೃಷ್ಣ ಮಠದ ಪರಿಸರದಲ್ಲೂ ಸ್ವಚ್ಛತೆ ಹಾಗೂ ಪ್ರವಾಸಿಗರ ಮೂಲಭೂತ ಸೌಕರ್ಯದ ನಿಟ್ಟಿನಲ್ಲಿ ಕೃಷ್ಣ ಕಾರಿಡಾರ್‌ನ ರೂಪುರೇಷೆ ಸಿದ್ಧಪಡಿಸಲಾಗುತ್ತಿದೆ.

ನಂದಿನಿ ಹಾಲಿನ ದರವನ್ನೂ ಹೆಚ್ಚಿಸುವಂತೆ ವಿವಿಧ ಹಾಲಿನ ಒಕ್ಕೂಟಗಳಿಂದ ಕೆಎಂಎಫ್‌ಗೆ ಮನವಿ ಬಂದಿದೆ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ತಿಳಿಸಿದ್ದಾರೆ.

ವನ್ಯಜೀವಿಧಾಮದಲ್ಲಿ ರಸ್ತೆ ನಿರ್ಮಾಣ, ಅಗಲೀಕರಣ ಯೋಜನೆಗಳಿಗೆ ಸಂಬಂಧಿಸಿದ ಯಾವುದೇ ಯೋಜನೆಗಳಿಗೆ ಅನುಮೋದನೆ ನೀಡುವ ಪೂರ್ವದಲ್ಲಿ ವನ್ಯಜೀವಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಕ್ರಮ ಕೈಗೊಳ್ಳುವಂತೆ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಒಂದೇ ವರ್ಷ 65,000 ಕೋಟಿ ತೆರಿಗೆ ಹಾಕಿದರೂ ಇನ್ನೂ ಭಿಕ್ಷೆ ಬೇಡುವುದು ನಿಂತಿಲ್ಲ. ಹಿಮಾಚಲ ಪ್ರದೇಶ, ಕೇರಳದಂತೆ ಕರ್ನಾಟಕ ಸರ್ಕಾರವು ಪಾಪರ್ ಆಗಿದೆ ಎಂದು ಆರ್ ಅಶೋಕ್ ಲೇವಡಿ ಮಾಡಿದ್ದಾರೆ.

ನಮ್ಮ ಮೇಲೆ ರಾಜಕೀಯ ದುರುದ್ದೇಶ ಮತ್ತು ಅಪ್ರಾಮಾಣಿಕತೆಯ ಆರೋಪ ಮಾಡಿರುವ ಸಂಕುಚಿತ ಮನಸ್ಸಿನ ತಮಿಳುನಾಡು ಮುಖ್ಯಮಂತ್ರಿಗೆ ನಾನು ಕೆಲವು ಪ್ರಶ್ನೆಗಳನ್ನು ಕೇಳಲು ಬಯಸುತ್ತೇನೆ ಎಂದು ನಟ ವಿಜಯ್ ಹೇಳಿದ್ದಾರೆ.

ಕಿರ್ಲೋಸ್ಕರ್ ಫೆರೋಸ್ ಇಂಡಸ್ಟ್ರೀಸ್ ಕರ್ನಾಟಕದಲ್ಲಿ ಮುಂದಿನ ಮೂರು ವರ್ಷಗಳಲ್ಲಿ 3ಸಾವಿರ ಕೋಟಿ ರೂ. ಬಂಡವಾಳ ಹೂಡಲಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ್ ತಿಳಿಸಿದರು.

ರಾಜ್ಯ ರಾಜಕಾರಣದಲ್ಲಿ ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆಯ ಚರ್ಚೆ ನಡೆಯುತ್ತಿದೆ. ಸಂಪುಟ ಸರ್ಜರಿ ಪುಕಾರಿನ ಬೆನ್ನಲ್ಲೇ ಕೆಲವು ಮಂತ್ರಿಗಳು ಪದತ್ಯಾಗದ ಮಾತುಗಳನ್ನಾಡುತ್ತಿದ್ದರೆ, ಇತ್ತ ಹಲವು ಹೊಸಬರಲ್ಲಿ ಮಂತ್ರಿ ಸ್ಥಾನದ ಕನಸು ಚಿಗುರೊಡೆದಿದೆ.

ಕೆಲವು ವರ್ಷಗಳ ಹಿಂದೆ ತೆರೆಕಂಡು ಸಂಚಲನ ಸೃಷ್ಟಿಸಿದ 'ದೃಶ್ಯಂ' ಸಿನಿಮಾವನ್ನು ನೆನಪಿಸುವ ರೀತಿಯಲ್ಲಿ ಭಯಾನಕ ಅಪರಾಧ ಅಹಮದಾಬಾದ್‌ನಲ್ಲಿ ನಡೆದಿದೆ.

ಹರಿಯಾಣ ಚುನಾವಣೆಯಲ್ಲಿ ಮತಕಳವು ಪ್ರಕರಣದಲ್ಲಿ ಚುನಾವಣಾ ಆಯೋಗ ಬಿಜೆಪಿಯೊಂದಿಗೆ ಕೈಜೋಡಿಸಿದೆ ಎಂದು ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ. ರಾಜ್ಯ ಚುನಾವಣಾ ಪಟ್ಟಿಯಲ್ಲಿ 25 ಲಕ್ಷ ನಕಲಿ ನಮೂದುಗಳನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ.

## ಕಾಶಿ ಹಲ್ವಾ



**ಬೇಕಾಗುವ ಪದಾರ್ಥಗಳು :**

ಬೂದುಕುಂಬಳ ಕಾಯಿ ತುರಿ – 3 ಕಪ್
ಸಕ್ಕರೆ – 1 ಕಪ್
ಕೇಸರಿ – 3 ಚಮಚ
ತುಪ್ಪ – 1 ಕಪ್
ಗೋಡಂಬಿ – 10 – 12
ಏಲಕ್ಕಿ ಪುಡಿ – ಚಿಟಿಕಿ

**ಮಾಡುವ ವಿಧಾನ :**

ಮೊದಲಿಗೆ ತುರಿದ ಕುಂಬಳಕಾಯಿಯನ್ನು ಕಡಾಯಿಗೆ ಹಾಕಿ ಕುಂಬಳಕಾಯಿ ಸಂಪೂರ್ಣವಾಗಿ ನೀರು ಹೀರಿಕೊಳ್ಳುವವರೆಗೆ ಬೇಯಿಸಿ ಅದಕ್ಕೆ 1 ಕಪ್ ಸಕ್ಕರೆ ಮತ್ತು ಕೇಸರಿಯನ್ನು ಹಾಕಿಕೊಂಡು, ಸಕ್ಕರೆ ಸಂಪೂರ್ಣವಾಗಿ ಕರಗುವ ತನಕ ಚೆನ್ನಾಗಿ ಮಿಶ್ರಣ ಮಾಡಿ. ಸಕ್ಕರೆ ಪಾಕವು ದಪ್ಪವಾಗುವವರೆಗೆ 5 ನಿಮಿಷ ಅಥವಾ ಅದಕ್ಕಿಂತ ಹೆಚ್ಚು ಕಾಲ ಕುದಿಸಿ. ನಂತರ, 1ಕಪ್ ತುಪ್ಪ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಗೋಡಂಬಿಯನ್ನು ಒಂದು ಟೀಸ್ಪೂನ್ ತುಪ್ಪದೊಂದಿಗೆ ಕಂದು ಬಣ್ಣ ಬರುವವರೆಗೆ ಹುರಿದು ಜೊತೆಗೆ ಏಲಕ್ಕಿ ಪುಡಿಯನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿಕೊಂಡರೆ ರುಚಿಕರವಾದ ಕಾಶಿ ಹಲ್ವಾ ಸವಿಯಲು ಸಿದ್ಧ.

## ಶೇಖ್ ಹಸೀನಾ ಪದಚ್ಯುತಿ : ಪರಿಪೂರ್ಣ ಸಿಐಎ ಪಿತೂರಿ !



ಢಾಕಾ: ಬಾಂಗ್ಲಾದೇಶದ ರಾಜಕಾರಣ ಪದಚ್ಯುತಿಗೊಂಡ ಶೇಖ್ ಹಸೀನಾ ಅವರ ಸುತ್ತಸುತ್ತುತ್ತಿದೆ. ಬಾಂಗ್ಲಾದೇಶದ ಮಾಧ್ಯ ಮಗಳು ಸೇನಾ ದಂಗೆಯ ಕುರಿತು ಮಾಹಿತಿಯೊಂದನ್ನು ಬಿಡುಗಡೆ ಮಾಡಿದ್ದು, ಇನ್ನೂ ಬಿಡುಗಡೆಯಾಗದ ಪುಸ್ತಕದಲ್ಲಿ, ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ಗೃಹ ಸಚಿವ ಅಸಾದುಜ್ಜಮಾನ್ ಖಾನ್ ಕಮಲ್ ಅಧಿಕಾರ ವರ್ಗಾವಣೆಯನ್ನು "ಪರಿಪೂರ್ಣ ಸಿಐಎ ಪಿತೂರಿ" ಎಂದು ಕರೆಯಲಾಗಿದೆ. ದೀಪ್ ಹಾಲ್ದರ್, ಜೈದೀಪ್ ಮಜುಂದಾರ್ ಮತ್ತು ಸಾಹಿದುಲ್ ಹಸನ್ ಖೋಕಾನ್ ಬರೆದು ಜಗ್ಗರ್ನಾಟ್ ಪ್ರಕಟಿಸಿದ "ಇನ್ಶಾಲ್ಲಾ ಬಾಂಗ್ಲಾದೇಶ: ದಿ ಸ್ಟೋರಿ ಆಫ್ ಆನ್ ಅನ್ ಫಿನಿಶ್ಡ್ ರೆವಲ್ಯೂಷನ್" ಎಂಬ ಪುಸ್ತಕದಲ್ಲಿ ಈ ಸ್ಫೋಟಕ ಸಂಗತಿಯನ್ನು ಬಹಿರಂಗಪಡಿಸಲಾಗಿದೆ.

## ಹೊರಗುತ್ತಿಗೆ ಸೇವೆಗೆ ಅಮೇರಿಕಾದಲ್ಲಿ ಹೆಚ್ಚುವರಿ ತೆರಿಗೆ !




ವಾಷಿಂಗ್ಟನ್ : ಭಾರತದ ಐಟಿ ಸೇವೆಗಳು, ಬಿಪಿಒ ಮತ್ತು ಕನ್ಸಲ್ಟಿಂಗ್ ಹಾಗೂ ಜಿಸಿಸಿ (ಗ್ಲೋಬಲ್ ಕೆಪ್ಯಾಬಿಲಿಟಿ ಸೆಂಟರ್) ಗಳ ಪಾಲಿಗೆ ತಲೆನೋವಾಗಬಹುದಾದ ವಿಧೇಯಕವೊಂದು ಅಮೆರಿಕದಲ್ಲಿ ಇದೀಗ ಸದ್ದಿಲ್ಲದೆ ಮಂಡನೆಯಾಗಿದೆ. ವಿದೇಶಿ ನೌಕರರು ಅಥವಾ ಕಂಪನಿಯಿಂದ ಪಡೆದುಕೊಳ್ಳುವ ಔಟ್‌ಸೋರ್ಸ್ (ಹೊರಗುತ್ತಿಗೆ) ಸೇವೆಗೆ ಪಾವತಿಸುವ ಹಣದ ಮೇಲೆ ಶೇ.25ರಷ್ಟು ತೆರಿಗೆ ವಿಧಿಸುವ ಪ್ರಸ್ತಾಪ ಈ ವಿಧೇಯಕದಲ್ಲಿದೆ. ಈ ಅಂತಾರಾಷ್ಟ್ರೀಯ ಉದ್ಯೋಗ ಸ್ಥಳಾಂತರ ತಡೆ ಕಾಯ್ದೆ (ಎಚ್‌ಐಆರ್‌ಇ) ವಿಧೇಯಕವನ್ನು ಅ.6ರಂದು ಓಹಾಯೋ ಸೆನೆಟರ್ ಬರ್ನಿ ಮೊರೆನೊ ಮಂಡಿಸಿದ್ದಾರೆ.

## ಟ್ರಂಪ್ ವಿಧಿಸಿದ್ದ 'ಪರಸ್ಪರ ಸುಂಕ' ರದ್ದುಗೊಳಿಸುವ ನಿರ್ಣಯಕ್ಕೆ ಅಮೆರಿಕ ಸೆನೆಟ್ ಅನುಮೋದನೆ



ವಾಷಿಂಗ್ಟನ್ : ಅಧ್ಯಕ್ಷ ಡೊನಾಲ್ಡ್ ಟ್ರಂಪ್ 100ಕ್ಕೂ ಅಧಿಕ ದೇಶಗಳ ಮೇಲೆ ವಿಧಿಸಿದ್ದ 'ಪರಸ್ಪರ ಸುಂಕ'ಗಳನ್ನು ರದ್ದುಗೊಳಿಸಲು ಆಗ್ರಹಿಸುವ ನಿರ್ಣಯದ ಪರ ಅಮೆರಿಕಾದ ಸೆನೆಟ್ ಮತ ಚಲಾಯಿಸಿರುವುದಾಗಿ ವರದಿಯಾಗಿದೆ. ಕಾರ್ಯನಿರ್ವಾಹಕ ಆದೇಶದ ಮೂಲಕ ಅಧ್ಯಕ್ಷರು ಜಾರಿಗೆ ತಂದಿದ್ದ 'ಪ್ರಾಥಮಿಕ ಮಟ್ಟದ' ಸುಂಕಗಳನ್ನು ಕೊನೆಗೊಳಿಸಲು ಡೆಮಾಕ್ರಟಿಕ್ ಸದಸ್ಯರು ಮಂಡಿಸಿದ್ದ ನಿರ್ಣಯದ ಪರ ನಾಲ್ವರು ರಿಪಬ್ಲಿಕನ್ ಸಂಸದರು (ಟ್ರಂಪ್ ಪಕ್ಷ) ಮತ ಹಾಕಿದ್ದು 51–47 ಮತಗಳಿಂದ ನಿರ್ಣಯಕ್ಕೆ ಅನುಮೋದನೆ ದೊರಕಿದೆ. ಇದಕ್ಕೂ ಮುನ್ನ ಬ್ರೆಝಿಲ್ ಮತ್ತು ಕೆನಡಾದ ವಿರುದ್ಧದ ಸುಂಕವನ್ನು ವಿರೋಧಿಸುವ ನಿರ್ಣಯಕ್ಕೆ ರಿಪಬ್ಲಿಕನ್ ಸದಸ್ಯರೂ ಬೆಂಬಲ ಸೂಚಿಸಿದ್ದರು.

## 'ಪೊಸೈಡನ್' ಡ್ರೋನ್ ಅನ್ನು ಯಶಸ್ವಿಯಾಗಿ ಪರೀಕ್ಷೆ ನಡೆಸಿದ ರಷ್ಯಾ



ಮಾಸ್ಕೋ: ಇತ್ತೀಚೆಗಷ್ಟೇ ವಿಶ್ವದ ಯಾವುದೇ ಮೂಲೆಯನ್ನು ತಲುಪಬಲ್ಲ ವಿಶ್ವದ ಮೊದಲ ಅಣುಚಾಲಿತ ಕ್ಷಿಪಣಿಯ ಪರೀಕ್ಷೆ ನಡೆಸಿದ್ದ ರಷ್ಯಾ ಇದೀಗ ಸಮುದ್ರದೊಳಗೆ ಸಾಗಿ ಸುನಾಮಿಯನ್ನೇ ಸೃಷ್ಟಿಸಬಲ್ಲ ಪರಮಾಣು ಚಾಲಿತ 'ಪೊಸೈಡನ್' ಡ್ರೋನ್‌ಅನ್ನು ಯಶಸ್ವಿಯಾಗಿ ಪರೀಕ್ಷೆ ನಡೆಸಿದೆ. ಈ ವಿಚಾರವನ್ನು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಖಚಿತಪಡಿಸಿದ್ದಾರೆ. ವಾರದ ಹಿಂದೆಯಷ್ಟೇ ಪುಟಿನ್ ಅವರು ಪರಮಾಣು ಚಾಲಿತ ಬ್ಯೂರೆವೆಸ್ನಿಕ್ ಕ್ಷಿಪಣಿಯ ಅಂತಿಮ ಪರೀಕ್ಷೆಯ ಕುರಿತು ಘೋಷಿಸಿದ್ದರು. ಈ ಡ್ರೋನ್ ಸಾಂಪ್ರದಾಯಿಕ ಸಬ್‌ಮರೀನ್‌ಗಿಂತಲೂ ವೇಗವಾಗಿ ಚಲಿಸಿ ವಿಶ್ವದ ಯಾವುದೇ ಮೂಲೆಯನ್ನು ತಲುಪಬಲ್ಲ ಸಾಮರ್ಥ್ಯ ಹೊಂದಿದ್ದು, ಸಮುದ್ರದಲ್ಲಿ ಸುನಾಮಿಯನ್ನೇ ಸೃಷ್ಟಿಸುತ್ತದೆ ಎಂದು ಪುಟಿನ್ ಹೇಳಿದ್ದಾರೆ.

## ರಕ್ಷಣಾ ಒಪ್ಪಂದಕ್ಕೆ ಭಾರತ–ಅಮೆರಿಕ ಸಹಿ



ಕೌಲಾಲಂಪುರ: ಭಾರತ ಮತ್ತು ಅಮೆರಿಕ ಶುಕ್ರವಾರ 10 ವರ್ಷಗಳ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿದ್ದು, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇದನ್ನು ಎರಡೂ ರಾಷ್ಟ್ರಗಳ ನಡುವಿನ ಬೆಳೆಯುತ್ತಿರುವ ಕಾರ್ಯತಂತ್ರದ "ಸಂಕೇತ" ಎಂದು ಬಣ್ಣಿಸಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಅವರ ಅಮೇರಿಕನ್ ರಕ್ಷಣಾ ಸಚಿವ ಪೀಟರ್ ಹೆಗ್ಸೆತ್ ನಡುವೆ ಕೌಲಾಲಂಪುರದಲ್ಲಿ ನಡೆದ ಸಭೆಯಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಭಾರತೀಯ ಸರಕುಗಳ ಮೇಲೆ ವಾಷಿಂಗ್ಟನ್ ಶೇಕಡಾ 50ರಷ್ಟು ಸುಂಕ ವಿಧಿಸಿದ ನಂತರ ತೀವ್ರ ಒತ್ತಡಕ್ಕೆ ಒಳಗಾದ ಸಂಬಂಧಗಳನ್ನು ಸರಿಪಡಿಸಲು ಎರಡೂ ಕಡೆಯವರು ಮಾಡಿದ ಪ್ರಯತ್ನಗಳ ಮಧ್ಯೆ ಒಪ್ಪಂದವನ್ನು ಬಲಪಡಿಸಲಾಗಿದೆ. ಈ ಒಪ್ಪಂದ "ನಮ್ಮ ರಕ್ಷಣಾ ಪಾಲುದಾರಿಕೆಯನ್ನು ಮುನ್ನಡೆಸುತ್ತದೆ, ಇದು ಪ್ರಾದೇಶಿಕ ಸ್ಥಿರತೆ ಮತ್ತು ತಡೆಗಟ್ಟುವಿಕೆಗೆ ಒಂದು ಮೂಲಾಧಾರವಾಗಿದೆ" ಎಂದು ಅಮೆರಿಕ ರಕ್ಷಣಾ ಸಚಿವ ಹೆಗ್ಸೇತ್ ಹೇಳಿದ್ದಾರೆ.

## ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಭಾರತಕ್ಕೆ ಸ್ವರ್ಣ



ಮಂಗಳೂರು : ಮಹಿಳೆಯರ ಸಿಂಗಲ್ಸ್ ಪಂದ್ಯಾಟದಲ್ಲಿ 3ನೇ ಶ್ರೇಯಾಂಕದ ಭಾರತದ ಮಾನ್ಸಿ ಸಿಂಗ್ ಅವರು ಚಾಂಪಿಯನ್ ಆಗಿ ಆಯ್ಕೆಯಾದರು. ಸ್ಕೋರ್ ವಿವರ: 21–17, 22–20. ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ಮತ್ತೆ ಭಾರತದ್ದೇ ಜೋಡಿ ಮುಖಾಮುಖಿಯಾದರು. ಅಗ್ರ ಶ್ರೇಯಾಂಕದ ರಿತ್ವಿಕ್ ಸಂಜೀವಿ ಸತೀಶ್ ಕುಮಾರ್ ಚಾಂಪಿಯನ್ ಪಟ್ಟ ಗಳಿಸಿದರು. ಎದುರಾಳಿ ಆಟಗಾರ ರೌನಕ್ ಚೌಹಾಣ್ ರನ್ನರ್ ಅಪ್ ಸ್ಥಾನ ಪಡೆದರು.

## ಭಾರತದ ಸಿಂಹಿಣಿಯರಿಗೆ ಚೊಚ್ಚಲ ವಿಶ್ವಕಪ್!




ಮುಂಬೈ : ಮುಂಬೈನ ಡಿವೈ ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ 2025ರ ಮಹಿಳಾ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಭಾರತದ ಹೆಣ್ಣುಮಕ್ಕಳು ಇತಿಹಾಸ ರಚಿಸಿದ್ದಾರೆ. ದಕ್ಷಿಣ ಆಫ್ರಿಕಾವನ್ನು 52 ರನ್‌ಗಳ ಅಂತರದಲ್ಲಿ ಸೋಲಿಸಿ, ಭಾರತ ಮಹಿಳಾ ತಂಡವು ತನ್ನ ಚೊಚ್ಚಲ ಏಕದಿನ ವಿಶ್ವಕಪ್ ಟ್ರೋಫಿಯನ್ನು ಎತ್ತಿಹಿಡಿದಿದೆ. ಈ ಜಯದ ಮೂಲಕ 150 ಕೋಟಿ ಭಾರತೀಯರ ಕನಸನ್ನು ನೆರವೇರಿಸಿದ ಹರ್ಮನ್‌ಪ್ರೀತ್ ಕೌರ್ ಪಡೆ, ವಿಶ್ವಮಟ್ಟದಲ್ಲಿ ಭಾರತದ ಹೆಸರನ್ನು ಮತ್ತೆ ಎತ್ತರಿಸಿದೆ.

## ಕ್ರಿಕೆಟ್ ಕಣದಲ್ಲಿ ಪಾಕ್, ಭಾರತ ಮತ್ತೆ ಮುಖಾಮುಖಿ




ಹೈದರಾಬಾದ್ : ಭಾರತ ಹಾಗೂ ಪಾಕ್ ನಡುವೆ ನಡೆದ ಏಷ್ಯಾ ಕಪ್ , ಮಹಿಳೆಯರ ವಿಶ್ವ ಕಪ್‌ನಲ್ಲಿ ಟೀಂ ಇಂಡಿಯಾ ಭರ್ಜರಿ ನೀಡುವ ಮೂಲಕ ಗೆದ್ದು ಬೀಗಿತು, ಇದರ ಬೆನ್ನಲ್ಲೇ ಉಭಯ ತಂಡಗಳು ಮತ್ತೆ ಮುಖಾಮುಖಿಯಾಗಲಿದೆ. ಏಷ್ಯಾಕಪ್ ರೈಸಿಂಗ್ ಸ್ಟಾರ್ಸ್ ಚಾಂಪಿಯನ್‌ಶಿಪ್‌ನ ವೇಳಾಪಟ್ಟಿಯನ್ನು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಬಿಡುಗಡೆ ಮಾಡಿದ್ದು, ಅದರಂತೆ ನ.16 ರಂದು ಭಾರತ ತಂಡ ತನ್ನ ಎದುರಾಳಿ ಪಾಕ್ ತಂಡವನ್ನು ಎದುರಿಸಲಿದೆ.

## ಕಬ್ಬಿಗೆ ಬೆಲೆ ನಿಗದಿ ಮಾಡೋದು ಕೇಂದ್ರ : ಸಿದ್ದರಾಮಯ್ಯ



ಬೆಂಗಳೂರು : ಕಬ್ಬಿಗೆ ಗರಿಷ್ಠ ಚಿಲ್ಲರೆ ಮಾರಾಟ ದರ ನಿಗದಿ ಮಾಡಬೇಕಿರುವುದು ಕೇಂದ್ರ ಸರ್ಕಾರವೇ ಹೊರತು ರಾಜ್ಯ ಸರ್ಕಾರ ಅಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಕಬ್ಬಿನ ದರ ಹೆಚ್ಚಿಸುವಂತೆ ಕಬ್ಬು ಬೆಳೆಗಾರರು ಬೆಳಗಾವಿ, ಬಾಗಲಕೋಟೆಯಲ್ಲಿ ಪ್ರತಿಭಟಿಸುತ್ತಿರುವುದು ಗಮನಕ್ಕೆ ಬಂದಿದೆ ಎಂದು ಹೇಳಿದರು. ಮಹಾರಾಷ್ಟ್ರದಲ್ಲಿ ಹೆಚ್ಚು ದರ ನೀಡುತ್ತಿದ್ದು, ಅದಕ್ಕೆ ಸಮಾನಾಂತರವಾಗಿ ದರ ನಿಗದಿ ಮಾಡಬೇಕೆಂದು ಕೋರಿದ್ದಾರೆ. ಈ ಸಂಬಂಧ ರೈತರೊಂದಿಗೆ ಚರ್ಚಿಸಲು ಸಚಿವರಾದ ಸತೀಶ ಜಾರಕಿಹೊಳಿ, ಶಿವಾನಂದ ಪಾಟೀಲ, ಎಂ.ಬಿ.ಪಾಟೀಲ ಜೊತೆ ಮಾತನಾಡಿದ್ದೇನೆ ಎಂದರು.

## ಯಾದಗಿರಿ ಶಾಂತಿ ಸಭೆ ಯಶಸ್ವಿ, ಪಟ್ಟು ಸಡಿಲಿಸಿದ ದಲಿತ ಸಂಘಟನೆ



ಯಾದಗಿರಿ : ಆರ್‌ಎಸ್‌ಎಸ್ (RSS) ತನ್ನ ಪಯಣದ 100 ವರ್ಷಗಳನ್ನು ಪೂರೈಸಿದೆ. ಯಾದಗಿರಿ ಜಿಲ್ಲೆಯ ಕೆಂಭಾವಿಯಲ್ಲಿ ಸಹ ದಲಿತ ಸಂಘಟನೆಗಳು ಆರ್‌ಎಸ್‌ಎಸ್ ಪಥ ಸಂಚಲನದ ವಿರುದ್ಧವಾಗಿ ಪ್ರತಿಭಟನೆ ನಡೆಸಲು ಮುಂದಾಗಿತ್ತು. ಈ ಈ ಹಿನ್ನೆಲೆಯಲ್ಲಿ ಸುರಪುರ ತಾಲೂಕ ಆಡಳಿತ ನಡೆಸಿದ ಶಾಂತಿ ಸಭೆ ಯಶಸ್ವಿಯಾಗಿದೆ. ದಲಿತ ಮುಖಂಡರನ್ನು ಮನವೊಲಿಸುವಲ್ಲಿ ಅಧಿಕಾರಿಗಳು ಸಹ ಸಕ್ಸಸ್ ಆಗಿದ್ದಾರೆ. ಹೀಗಾಗಿ ಕೆಂಭಾವಿಯಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ನೀಡಲಾಗಿದೆ. ಪಟ್ಟು ಹಿಡಿದಿದ್ದ ಮುಖಂಡರು ಕೊನೆಗೆ ಶಾಂತಿ ಸಭೆ ಬಳಿಕ ಪಟ್ಟು ಸಡಿಲಿಸಿದರು.

## ಕರ್ನಾಟಕ ಮಾವು ಬೆಳೆಗಾರರ ನೆರವಿಗೆ ಧಾವಿಸಿದ ಕೇಂದ್ರ ಸರಕಾರ !



ಹಾಸನ : ಹವಮಾನ ವೈಪರಿತ್ಯ, ಇಳುವರಿ ಸಮಸ್ಯೆ ಸೇರಿದಂತೆ ಹಲವು ಕಾರಣಗಳಿಂದ ಕಳೆದ ಕೆಲ ವರ್ಷದಿಂದ ಕರ್ನಾಟಕ ಮಾವು ಬೆಳೆಗಾರರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಇದೇ ಕಾರಣದಿಂದ ಈ ಬಾರಿಯ ಮಾವಿನ ಸೀಸನ್‌ನಲ್ಲಿ ಮಾವಿನ ಹಣ್ಣಿನ ಬೆಲೆ ಕುಸಿತವಾಗಿ ರೈತರು ಕಂಗಾಲಾಗಿದ್ದರು. ಈ ಕುರಿತು ಮಾಜಿ ಪ್ರಧಾನಿ ಹೆಚ್‌ಡಿ ದೇವೇಗೌಡ, ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಮನವಿ ಮಾಡಿದ್ದರು. ಇದೀಗ ದೇವೇಗೌಡರ ಮನವಿಗೆ ಸ್ಪಂದಿಸಿದ ಕೇಂದ್ರ ಸರ್ಕಾರ, ಕರ್ನಾಟಕ ಮಾವು ಬೆಳೆಗಾರರ ನೆರವಿಗೆ ಧಾವಿಸಿದೆ. ಕರ್ನಾಟಕ ಮಾವು ಬೆಳೆಗಾರರು ಸಂಕಷ್ಟದಲ್ಲಿದ್ದಾರೆ ಅನ್ನೋದು ಕೇಂದ್ರಕ್ಕೆ ಅರಿವಾಗಿದೆ.

## ಬೆಳಗಾವಿ ಮಹಾರಾಷ್ಟ್ರದೊಂದಿಗೆ ವಿಲೀನಗೊಳ್ಳಲು ಅವಕಾಶ ನೀಡುವುದಿಲ್ಲ : ಸಿಎಂ



ಬೆಂಗಳೂರು: ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದು, ಮಹಾರಾಷ್ಟ್ರದೊಂದಿಗೆ ವಿಲೀನಗೊಳ್ಳಲು ಎಂದಿಗೂ ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ. ಮೈಸೂರು ಬ್ಯಾಂಕ್ ವೃತ್ತದ ನೃಪತುಂಗ ಮಂಟಪದಲ್ಲಿ ನಡೆದ ಭುವನೇಶ್ವರಿ ಮತ್ತು ಅಣ್ಣಮ್ಮ ದೇವಿಯ ಭವ್ಯ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಸಿಎಂ, ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದದ ಕುರಿತು ಮಹಾಜನ ಸಮಿತಿ ವರದಿಯೇ ಅಂತಿಮ ಎಂದರು. 'ಬೆಳಗಾವಿ ವಿಷಯದಲ್ಲಿ ಬಗ್ಗೆ ಯಾವುದೇ ರಾಜಿ ಇಲ್ಲ. ಮಹಾರಾಷ್ಟ್ರ ಸರ್ಕಾರ ಈ ವಿಷಯದ ಬಗ್ಗೆ ಸುಪ್ರೀಂಕೋರ್ಟ್ ಮೆಟ್ಟಿಲೇರಿದೆ.

## ಧಾರವಾಡ ಜಿಲ್ಲೆಯ ರೈತರಿಗೆ 63.16 ಕೋಟಿ ಪರಿಹಾರ ಪಾವತಿ




ಧಾರವಾಡ: ಜಿಲ್ಲೆಯ 6 ತಾಲ್ಲೂಕುಗಳ 65,217 ರೈತರಿಗೆ 63.16 ಕೋಟಿ ಪರಿಹಾರ ಪಾವತಿಸಲಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ತಿಳಿಸಿದ್ದಾರೆ. ಧಾರವಾಡ 11,981 ರೈತರಿಗೆ ?10.59 ಕೋಟಿ, ನವಲಗುಂದ 18,433 ರೈತರಿಗೆ 18.74ಕೋಟಿ, ಹುಬ್ಬಳ್ಳಿ 11,058 ರೈತರಿಗೆ 11.78ಕೋಟಿ, ಕುಂದಗೋಳ10,912 ರೈತರಿಗೆ (11,261.02 ಹೆಕ್ಟೇರ್ ಬೆಳೆ ಹಾನಿ) 9.58 ಕೋಟಿ, ಹುಬ್ಬಳ್ಳಿ ನಗರ 839 ರೈತರಿಗೆ 65.51 ಲಕ್ಷ, ಅಣ್ಣಿಗೇರಿ 11,994 ರೈತರಿಗೆ ಹೆಕ್ಟೇರ್ ಬೆಳೆ 11.79 ಕೋಟಿ ಪಾವತಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಾಬಾ ಬುಡನ್ ಸ್ವಾಮಿ ದರ್ಗಾ ನಿಷೇಧಿತ ಸ್ಥಳದಲ್ಲಿ ಮಾಂಸಾಹಾರ ಸೇವನೆ !



ಚಿಕ್ಕಮಗಳೂರು : ಇನಾಂ ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ ಆವರಣದಲ್ಲಿ ಮತ್ತೆ ವಿವಾದ ಎದ್ದಿದೆ. ನಿಷೇಧಿತ ಹೋಮ ಮಂಟಪದ ಪಕ್ಕದಲ್ಲೇ ಮುಸ್ಲಿಂ ಕುಟುಂಬ ಮಾಂಸಾಹಾರ ಸೇವಿಸುತ್ತಿರುವ ವಿಡಿಯೋ ವೈರಲ್ ಆಗಿದ್ದು, ಹಿಂದೂ ಸಂಘಟನೆಗಳಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಜಿಲ್ಲಾಡಳಿತ ಈ ವಿವಾದಿತ ಪ್ರದೇಶದ 200 ಮೀಟರ್ ವ್ಯಾಪ್ತಿಯಲ್ಲಿ ಮಾಂಸಾಹಾರ ಸೇವನೆಗೆ ಪೂರ್ವದಲ್ಲೇ ನಿಷೇಧ ಹೇರಿತ್ತು. ಆದರೂ ನಿಯಮ ಉಲ್ಲಂಘನೆಯಾಗಿದೆ ಎಂಬ ಆರೋಪ ಕೇಳಿಬಂದಿದೆ. ಸಾಮಾಜಿಕ ಜಾಲತಾಣಗಳಲ್ಲಿ ವೇಗವಾಗಿ ಹರಿದಾಡಿದ ಈ ದೃಶ್ಯಗಳು ಆಕ್ರೋಶಕ್ಕೆ ಕಾರಣವಾಗಿದೆ.

## ವರ್ತುಲ ರೈಲು ಯೋಜನೆ ಸದ್ಯಕ್ಕೆ ಸ್ಥಗಿತ : ವಿ. ಸೋಮಣ್ಣ



ಬೆಂಗಳೂರು : ಬೆಂಗಳೂರಿನ ಹೊರವಲಯದ ಸಂಪರ್ಕ ಸುಲಭವಾಗುವಂತೆ ಯೋಜಿಸಲಾಗಿದ್ದ ವರ್ತುಲ ರೈಲು ಯೋಜನೆಯ ವೆಚ್ಚ 1 ಲಕ್ಷ ಕೋಟಿಗೆ ತಲುಪಿ ಅಂದಾಜಿಗಿಂತ ಭಾರೀ ಹೆಚ್ಚಳವಾಗುವ ಹಿನ್ನೆಲೆಯಲ್ಲಿ ಅದನ್ನು ಅನುಷ್ಠಾನ ಮಾಡುವುದು ಸದ್ಯಕ್ಕೆ ಇಲ್ಲ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದ್ದಾರೆ. 240ಕಿಮೀ ವರ್ತುಲ ರೈಲು ಯೋಜನೆಯನ್ನು ಸ್ವತಃ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಬೆಂಗಳೂರಿನಲ್ಲಿ ಘೋಷಿಸಿ ದ್ದರು. ಮುಂದಿನ 50 ವರ್ಷವನ್ನು ಗಮನದಲ್ಲಿ ಇಟ್ಟುಕೊಂಡು ವರ್ತುಲ ರೈಲು ಯೋಜನೆ ರೂಪಿಸಲಾಗಿತ್ತು.

## ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ ವಿಜಯ್ ಮಲ್ಯ ಹೈಕೋರ್ಟ್ ಅರ್ಜಿ!



ಬೆಂಗಳೂರು : ಬ್ಯಾಂಕ್‌ಗಳಿಗೆ ಸಾವಿರಾರು ಕೋಟಿ ರೂಪಾಯಿ ವಂಚಿಸಿ ವಿದೇಶಕ್ಕೆ ಪರಾರಿಯಾಗಿರುವ ವಿಜಯ್ ಮಲ್ಯ ವಿರುದ್ಧ ದೇಶದ ಹಲವು ಕೋರ್ಟ್‌ಗಳಲ್ಲಿ ಪ್ರಕರಣಳಿವೆ. ಮತ್ತೊಂದೆಡೆ ಕೇಂದ್ರ ಸರ್ಕಾರ ವಿಜಯ್ ಮಲ್ಯ ಲಂಡನ್‌ನಿಂದ ಗಡೀಪಾರು ಮಾಡಲು ಕಾನೂನು ಹೋರಾಟ ನಡೆಸುತ್ತಿದೆ. ವಂಚನೆ ಪ್ರಕರಣಗಳಿಂದ ವಿಲನ್ ಆಗಿರುವ ವಿಜಯ್ ಮಲ್ಯ, ಕೆಲ ತಿಂಗಳ ಹಿಂದೆ ಪಾಡ್‌ಕಾಸ್ಟ್ ಮೂಲಕ ಪ್ರತ್ಯಕ್ಷರಾಗಿ ಹಲವರ ಪಾಲಿಗೆ ಹೀರೋ ಆಗಿದ್ದರು. ಇದೀಗ ಎಲ್ಲವೂ ಅದರ ಪಾಡಿಗೆ ನಡೆಯುತ್ತಿದೆ ಅನ್ನೋವಷ್ಟರಲ್ಲೇ ವಿಜಯ್ ಮಲ್ಯ ಲಂಡನ್‌ನಲ್ಲಿ ಕುಳಿತು ಕರ್ನಾಟಕ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದಾರೆ.

## ನಿಷೇಧ ಹೇರಿದರೆ ನೇಪಾಳ ಮಾದರಿ ದಂಗೆ ಆದೀತು : ಸುಪ್ರೀಂಕೋರ್ಟ್ !



ನವದೆಹಲಿ: ಬ್ಲೂಫಿಲಂಗೆ ನಿಷೇಧ ಹೇರಿದರೆ ನೇಪಾಳ ಮಾದರಿ ಜೆನ್ ಝೀ ದಂಗೆ ಆದೀತು ಎಂದು ಸುಪ್ರೀಂಕೋರ್ಟ್ ಹೇಳಿದೆ. ಅಶ್ಲೀಲ ವೆಬ್ಸೈಟ್ ನಿಷೇಧ ಕೋರಿದ ಅರ್ಜಿ ವಿಚಾರಣೆಯ ವೇಳೆ ನೇಪಾಳದಲ್ಲಿ ಏನಾಗಿದೆ ಎಂಬುದು ಗೊತ್ತಿದೆಯಲ್ಲ ಎಂದು ಅರ್ಜಿದಾರರನ್ನು ಪ್ರಶ್ನಿಸಿದೆ. ಬ್ಲೂ ಫಿಲಂಗಳ ನಿಷೇಧ ಕೋರಿ ಸುಪ್ರೀಂಕೋರ್ಟ್ ನಲ್ಲಿ ಸಲ್ಲಿಸಲಾದ ಅರ್ಜಿಗೆ ಮನ್ನಣೆ ನೀಡಲು ಸುಪ್ರೀಂಕೋರ್ಟ್ ಹಿಂದೇಟು ಹಾಕಿದ್ದು, ನೇಪಾಳದಲ್ಲಿ ಸೋಷಿಯಲ್ ಮೀಡಿಯಾ ನಿಷೇಧದ ವಿರುದ್ಧ ಉಂಟಾಗಿದ್ದ ದ್ದಂಗೆಯನ್ನು ಉದಾಹರಣೆಯಾಗಿ ನೀಡಲಾಗಿದೆ. ನೇಪಾಳದಲ್ಲಿ ನಿಷೇಧ ಹೇರಲು ಯತ್ನಿಸಿದಾಗ ಏನಾಯಿತು ಎಂದು ಗೊತ್ತಿದೆಯಲ್ಲವೇ ಎಂದು ಹೇಳಿದೆ.

## ಮಾವೋವಾದಿ ಭಯೋತ್ಪಾದನೆಯು ನಿರ್ಮೂಲನೆಯತ್ತ ಸಾಗುತ್ತಿದೆ : ಪ್ರಧಾನಿ ಮೋದಿ



ಛತ್ತೀಸ್‌ಗಡ : ಕಳೆದ 25 ವರ್ಷಗಳಲ್ಲಿ ಛತ್ತೀಸ್‌ಗಡದ ಪಯಣ ಸ್ಫೂರ್ತಿದಾಯಕವಾಗಿದೆ. ರಾಜ್ಯವು ಹಿಂದೆ ಮಾವೋವಾದಿ ಹಿಂಸಾಚಾರ ಮತ್ತು ಹಿಂದುಳಿದಿರುವಿಕೆಯೊಂದಿಗೆ ಗುರುತಿಸಿಕೊಂಡಿತ್ತು. ಆದರೆ ಅದು ಈಗ ಸಮೃದ್ಧಿ, ಭದ್ರತೆ ಮತ್ತು ಸ್ಥಿರತೆಯ ಸಂಕೇತವಾಗಿ ಹೊರಹೊಮ್ಮಿದೆ ಎಂದು ಪ್ರಧಾನಿ ನರೇಂದ್ರ ಮೋದಿಯವರು ಹೇಳಿದರು. ನೂತನ ಛತ್ತೀಸ್‌ಗಡ ವಿಧಾನಸಭಾ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಧಾನಭೆಯು ಕೇವಲ ಕಾನೂನುಗಳನ್ನು ರೂಪಿಸುವ ಸ್ಥಳವಲ್ಲ. ಅಭಿವೃದ್ಧಿಗೆ ಬದ್ಧತೆ ಮತ್ತು ಭಾರತವನ್ನು ಹೊಸ ಎತ್ತರಕ್ಕೊಯ್ಯುವ ವಿಶ್ವಾಸವನ್ನು ಪ್ರತಿಬಿಂಬಿಸಬೇಕು ಎಂದು ಹೇಳಿದರು.

## AIADMK ಭಿನ್ನಮತ ಸ್ಫೋಟ : ಸೆಂಗೊಟ್ಟೈಯನ್ ಉಚ್ಚಾಟನೆ



ಚೆನ್ನೈ : ಮುಂದಿನ ವರ್ಷ ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದು ವಿಪಕ್ಷ ಎಐಎಡಿಎಂಕೆಯಲ್ಲಿ ಭಿನ್ನಮತ ಸ್ಫೋಟಗೊಂಡಿದ್ದು, ಹಿರಿಯ ನಾಯಕ 9 ಬಾರಿಯ ಶಾಸಕ ಕೆ.ಎ. ಸೆಂಗೊಟ್ಟೈಯನ್ ಅವರನ್ನು ಪಕ್ಷದಿಂದ ಹೊರ ಹಾಕಲಾಗಿದೆ. ಮಾಜಿ ಮುಖ್ಯಮಂತ್ರಿ ಪನ್ನೀರ್‌ಸೆಲ್ವಂ, ಪಕ್ಷದ ಐಕಾನ್ ಜಯಲಲಿತಾರ ಆಪ್ತವಲಯದಲ್ಲಿದ್ದ ವಿ.ಕೆ.ಶಶಿಕಲಾ ಮತ್ತು ಟಿಟಿವಿ ದಿನಕರನ್ ಅವರಂತಹ ವಜಾಗೊಂಡ ಇತರರು ಪಕ್ಷಕ್ಕೆ ಮರಳಲು ಅವಕಾಶ ನೀಡಬೇಕು ಎಂಬ ಸಲಹೆ ನೀಡಿದ ಸೆಂಗೊಟ್ಟೈಯನ್ ಅವರನ್ನೇ ಪಕ್ಷದಿಂದ ಹೊರ ಹಾಕಲಾಗಿದೆ.

## ಸಾಮಾಜಿಕ ಮಾಧ್ಯಮ ಮೂಲಕ ನೋಟಿಸ್ ನೀಡುವ ಕ್ರಮ ತಿರಸ್ಕಾರಿಸಿದ ಸುಪ್ರಿಂ



ನವದೆಹಲಿ : ವಾಟ್ಸಾಪ್ ಅಥವಾ ಟ್ವಿಟರ್ ಮುಂತಾದ ಸಾಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ನೋಟಿಸ್ ನೀಡುವ ಕ್ರಮವನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ. ನೋಟಿಸ್ ನೀಡುವ ಪ್ರಕ್ರಿಯೆ ಕಾನೂನಿನ ಪ್ರಕಾರ ನಡೆಯಬೇಕು ಎಂದು ನ್ಯಾಯಮೂರ್ತಿ ಅರವಿಂದ್ ಕುಮಾರ್ ನೇತೃತ್ವದ ಸುಪ್ರೀಂ ಪೀಠ ಸ್ಪಷ್ಟಪಡಿಸಿದೆ. ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆ ವೇಳೆ, ನ್ಯಾಯಮೂರ್ತಿ ಅರವಿಂದ್ ಕುಮಾರ್ ಮತ್ತು ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಅವರಿದ್ದ ಪೀಠವು, "ವಾಟ್ಸಾಪ್ ಅಥವಾ ಟ್ವಿಟರ್ ನಲ್ಲಿ ನೋಟಿಸ್ ನೀಡಬೇಡಿ. ಕಾನೂನಿನ ಪ್ರಕಾರ ಸರಿಯಾದ ರೀತಿಯಲ್ಲಿ ಸಲ್ಲಿಸಿ" ಎಂದು ಎಚ್ಚರಿಕೆ ನೀಡಿತು.

ಕರಾವಳಿ ತರಂಗಿಣಿ



# ಸಿನಿ ತರಂಗಿಣಿ

## ಯಜಮಾನನಿಗೆ ಆಧುನಿಕ ತಂತ್ರಜ್ಞಾನ ಜೋಡಣೆ..



ಸರಿಯಾಗಿ 25 ವರ್ಷಗಳ ಹಿಂದೆ 2000ನೇ ಇಸವಿಯಲ್ಲಿ ತೆರೆಕಂಡ ಕರ್ನಾಟಕ ರತ್ನ ಡಾ॥ವಿಷ್ಣುವರ್ಧನ್ ಅಭಿನಯದ, ಮೆಹರುನ್ನಿಸಾ ರೆಹಮಾನ್ ನಿರ್ಮಾಣದ ಹಾಗೂ ಆರ್ ಶೇಷಾದ್ರಿ – ರಾಧಾ ಭಾರತಿ ನಿರ್ದೇಶನದ "ಯಜಮಾನ" ಚಿತ್ರ ಇದೇ ನವೆಂಬರ್ 7 ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ಮರು ಬಿಡುಗಡೆಯಾಗುತ್ತಿದೆ. ಜನಮೆಚ್ಚಿದ ಈ ಚಿತ್ರ ಆಧುನಿಕ ತಂತ್ರಜ್ಞಾನದಿಂದ ಸಿಂಗಾರಗೊಂಡಿದೆ. ಮುನಿಸ್ವಾಮಿ ಈ ಚಿತ್ರವನ್ನು ಮರು ಬಿಡುಗಡೆ ಮಾಡುತ್ತಿದ್ದಾರೆ. ಈ ಸಂಧರ್ಭದಲ್ಲಿ ಮಾತನಾಡಿದ ನಿರ್ಮಾಪಕ ರೆಹಮಾನ್, ಈ ಚಿತ್ರ ಹಿಟ್ ಆಗಲು ಪ್ರಮುಖ ಕಾರಣ ಗುರು ಸಮಾನರಾದ ವಿಷ್ಣುವರ್ಧನ್ ಹಾಗೂ ಕೆ.ವಿ.ನಾಗೇಶ್ ಕುಮಾರ್ ಅವರು. ಈ ಚಿತ್ರ ಮತ್ತೆ ಬಿಡುಗಡೆ ಆಗುತ್ತಿದೆ. ಹಿಂದೆ ನೀವು ನೀಡಿದ ಗೆಲುವಿಗಿಂತ ದೊಡ್ಡ ಗೆಲುವನ್ನು ನೀಡಿ ಎಂದರು.

## ಹೊಸಬರ 'ದಿ ಟಾಸ್ಕ್'ಗೆ ಧ್ರುವ ಸರ್ಜಾ ಬೆಂಬಲ..



ಲೋಕಪೂಜ್ಯ ಪಿಕ್ಚರ್ ಹೌಸ್ ಸಂಸ್ಥೆಯಡಿ ವಿಜಯ್ ಕುಮಾರ್ ಹಾಗೂ ರಾಮಣ್ಣ ನಿರ್ಮಿಸಿರುವ 'ದಿ ಟಾಸ್ಕ್' ನವೆಂಬರ್ 21ಕ್ಕೆ ತೆರೆಗೆ ಬರುತ್ತಿರುವ ಈ ಚಿತ್ರದ ಹಾಡು ಬಿಡುಗಡೆ ಕಾರ್ಯಕ್ರಮ ಬೆಂಗಳೂರಿನ ಕಲಾವಿದರ ಸಂಘದಲ್ಲಿ ನಡೆಯಿತು. ಧ್ರುವ ಸರ್ಜಾ ವಿಶೇಷ ಅತಿಥಿಯಾಗಿ ಆಗಮಿಸಿ ಸಾಗುವ ದಾರಿಯ ಎಂಬ ಗೀತೆಯನ್ನು ಬಿಡುಗಡೆ ಮಾಡಿ ಸಾಂಗ್ ತುಂಬಾ ಪ್ರಾಮಿಸಿಂಗ್ ಆಗಿದೆ. ಎಲ್ಲರಿಗೂ ಈ ಹಾಡು ಇಷ್ಟವಾಗುತ್ತದೆ. ಟಾಸ್ಕ್ ಟೀಸರ್ ನೋಡಿದ್ರೆ ಆಕ್ಷನ್ ಥ್ರಿಲ್ಲರ್ ಎನಿಸುತ್ತದೆ. ಈ ಚಿತ್ರದಿಂದ ಇಬ್ಬರು ಹೊಸ ಹೀರೋಗಳು ಲಾಂಚ್ ಆಗುತ್ತಿದ್ದಾರೆ. ನವೆಂಬರ್ 21ರಂದು ಎಲ್ಲಾ ಕನ್ನಡ ಕಲಾಭಿಮಾನಗಳು ಚಿತ್ರ ನೋಡಿ ಆಶೀರ್ವಾದ ಮಾಡಿ ಎಂದು ಹಾರೈಸಿದರು. ಚೂರಿಕಟ್ಟೆ ಖ್ಯಾತಿಯ ರಾಘು ಶಿವಮೊಗ್ಗ ನಿರ್ದೇಶನ ಮಾಡಿದ್ದಾರೆ.

## ಪ್ರೇಮಂ ಮಧುರಂ ಪ್ರೇಮಂ ಅಮರಂ..

ಹೊಸಬರೇ ಸೇರಿಕೊಂಡು ಸಿದ್ದಪಡಿಸಿರುವ 'ಪ್ರೇಮಂ ಮಧುರಂ' ಚಿತ್ರದ ಟ್ರೇಲರ್ ಮತ್ತು ಹಾಡುಗಳ ಬಿಡುಗಡೆ ಸಮಾರಂಭವು ಶ್ರೀ ರೇಣುಕಾಂಬ ಸ್ಟುಡಿಯೋದಲ್ಲಿ ಅದ್ದೂರಿಯಾಗಿ ನಡೆಯಿತು. ರೂಬಿ ಕ್ರಿಯೇಷನ್ಸ್ ಅಡಿಯಲ್ಲಿ ಅರಗೊಂಡ ಶೇಖರ್‌ರೆಡ್ಡಿ ನಿರ್ಮಾಣ ಮಾಡಿದ್ದಾರೆ. ಗಾಂಧಿ.ಎ.ಬಿ ಸಿನಿಮಾಕ್ಕೆ ಕಥೆ, ನಿರ್ದೇಶನ ಜತೆಗೆ ನಾಯಕನಾಗಿ ಅಭಿನಯಿಸಿದ್ದಾರೆ. ನಾಯಕಿಯರಾದ ಐಶ್ವರ್ಯ ದಿನೇಶ್, ಅನುಷಾ ಜೈನ್ ಚಿತ್ರೀಕರಣದ ಅನುಭವಗಳನ್ನು ಹಂಚಿಕೊಂಡರು. ಮೂರು ಹಾಡುಗಳಿಗೆ ವಿಶಾಲ್ ಆಲಾಪ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ಮಂಜುನಾಥ ಹೆಗಡೆ, ಸಂಕಲನ ಸಂಜೀವ್ ಜಾಗಿರ್‌ದಾರ್, ಹಿನ್ನಲೆ ಶಬ್ದ ಶ್ರೀಮಾನ್ ಗಂಧರ್ವ, ನೃತ್ಯ ಮನೀಶ್ ಕೇಶವ್, ಲೋಕೇಶ್ ಅರ್ಜುನ್, ರಾಂಕುಮಾರ್.ಡಿ, ಗೌತಂ ಸೆಲ್ವರಾಜ್ ಅವರದ್ದಾಗಿದೆ. ತಾರಾಗಣದಲ್ಲಿ ಸಿಹಿಕಹಿಚಂದ್ರು, ರಾಜೇಶ್ವರಿ, ಅನೂಪ್ ಅಗಸ್ತ್ಯ ಮುಂತಾದವರು ನಟಿಸಿದ್ದಾರೆ.



## ಜೈ ಗದಾಕೇಸರಿಗೆ ಪೂಜಾ ಸಿ ಸಂಕಲನ..

ಬಿ ಬಿ ಮೂವಿ ಕ್ರಿಯೇಶನ್ಸ್ ಲಾಂಛನದಲ್ಲಿ ನಿರ್ಮಾಣವಾದ ಜೈ ಗದಾಕೇಸರಿ ಚಿತ್ರ ಇದೇ ತಿಂಗಳ 7ರಂದು ಬಿಡುಗಡೆಯಾಗುತ್ತಿದೆ. ಈ ಚಿತ್ರವನ್ನು ಯತೀಶ್ ಕುಮಾರ ಮತ್ತು ಮಂಜು ಅವರು ನಿರ್ದೇಶನ ಮಾಡಿದ್ದಾರೆ. ಹಲವಾರು ವರ್ಷಗಳ ಕಾಲ ಸಹ ಸಂಕಲನಕಾರರಾಗಿ ಹಲವಾರು ಸಿನಿಮಾಗಳಿಗೆ ದುಡಿದಿರುವ ಪೂಜಾ ಸಿ ಅವರು ಜೈ ಗದಾಕೇಸರಿ ಚಿತ್ರಕ್ಕೆ ಮೊದಲ ಬಾರಿ ಸ್ವತಂತ್ರ ಸಂಕಲನಕಾರರಾಗಿದ್ದಾರೆ. ಇದು ಅವರ ಮೊದಲನೇ ಚಿತ್ರವಾಗಿದೆ. ಸಂಕಲನದ ಜೊತೆಗೆ ಈ ಚಿತ್ರಕ್ಕೆ ಕಿಚ್ಚು ಕಿಚ್ಚು ಕೀಚಕ ವ್ಯಕ್ತಿ ಚಿತ್ರ ರೋಚಕ ಎಂಬ ಒಂದು ಗೀತೆಯನ್ನು ಕೂಡ ರಚನೆ ಮಾಡಿದ್ದಾರೆ. ಈ ಚಿತ್ರದಿಂದ ಮಹಿಳಾ ಸಂಕಲನಕಾರರ ಲಿಸ್ಟ್‌ಗೆ ಮತ್ತೊಬ್ಬ ಮಹಿಳೆ ಸೇರ್ಪಡೆಗೊಂಡಿದ್ದಾರೆ. ಚಿತ್ರರಂಗದಲ್ಲಿ ಎಲ್ಲಾ ವಿಭಾಗಗಳಲ್ಲಿ ಮಹಿಳೆಯರ ಜಾಸ್ತಿ ತೊಡಗಿಕೊಳ್ಳುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ.











KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021